# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಬಸಾಪಟ್ಟಣ ಗ್ರಾಮ ಪಂಚಾಯಿತಿಯ ಬಸಾಪಟ್ಟಣ ಗ್ರಾಮದ ಮೂರನೇ ವಾರ್ಡ್‌ನ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಪ್ರಾಆಕ/ಜಿಪಂ/129/2018-19/1545-731/2019, ದಿನಾಂಕ: 15.07.2019.
2) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ವಿಚಾರಣಾ ನೋಟಿಸ್‌ಗಳು, ದಿನಾಂಕ: 10.05.2019.
3) ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್, ಬಸಾಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಕಾರಣ ಕೇಳುವ ನೋಟೀಸ್‌ಗೆ ಲಿಖಿತ ಹೇಳಿಕೆ, ದಿನಾಂಕ:24.06.2019.
4) ಕಾರ್ಯನಿರ್ವಾಹಕ ಅಧಿಕಾರಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ಕಾರಣ ಕೇಳುವ ನೋಟೀಸ್ ದಿನಾಂಕ:12.12.2018.
5) ಸದರಿ ಗ್ರಾಮ ಪಂಚಾಯಿತಿ ಸದಸ್ಯರ ಲಿಖಿತ ಹೇಳಿಕೆ:18.12.2018.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಬಸಾಪಟ್ಟಣ ಗ್ರಾಮ ಪಂಚಾಯಿತಿಯ ಬಸಾಪಟ್ಟಣ ಗ್ರಾಮದ ಮೂರನೇ ವಾರ್ಡ್‌ನ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್, ಅಧ್ಯಕ್ಷರು, ಬಸಾಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ಕಾನೂನು ಬಾಹಿರವಾಗಿ ನಡೆದುಕೊಂಡು ಬಡ ಕುಟುಂಬದ ಪಿಂಚಣಿ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ದೃಡಪಟ್ಟಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ)(1) ಪ್ರಕಾರ ಕ್ರಮ ಜರುಗಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43-ಎ(iii) ಮತ್ತು 48(4) ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ: 10-05-2019 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ತಮ್ಮ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಸಾಕ್ಷಿಗಳು ತಮ್ಮ ಹೇಳಿಕೆ ನೀಡಿದ್ದು, ಸದರಿ ಹೇಳಿಕೆಯು ಅವರು ತಮ್ಮ ಸ್ವಯಂ ಪ್ರೇರಣೆಯಿಂದ ನೀಡಿರುವ ಹೇಳಿಕೆಯಾಗಿರುವುದಿಲ್ಲ. ಲೆಕ್ಕಧಿಕಾರಿಗಳು ತಾವೇ ಸ್ವತಃ ಬರೆದ ಹೇಳಿಕೆಯಾಗಿರುತ್ತದೆಯೆಂದು ಹಾಗೂ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸುವ ಸಲುವಾಗಿ ತರಾತುರಿಯಲ್ಲಿ ಸಾಕ್ಷಿದಾರರ ಮನೆಗೆ ಹೋಗಿ ತಾವೇ ಬರೆದ ಹೇಳಿಕೆಗೆ ಸಾಕ್ಷಿದಾರರಾದ ಶ್ರೀಮತಿ ಲಕ್ಷಮಮ್ಮ ಈರಪ್ಪ ಮತ್ತು ಹನುಮಂತಪ್ಪ ಹುಲಗಪ್ಪ ಇವರ ಸಹಿಯನ್ನು ಒತ್ತಾಯಪೂರ್ವಕವಾಗಿ ಮಾಡಿಸಿಕೊಂಡು ಬಂದಿರುತ್ತಾರೆ. ಆದ್ದರಿಂದ ಸದರಿ ಲೆಕ್ಕಾಧಿಕಾರಿ ರವರು ನೀಡಿರುವ ವರದಿ ವಿಷಯ ಸತ್ಯಕ್ಕೆ ದೂರವಾಗಿರುತ್ತದೆಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

--

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ದಿ:12.12.2018 ಜಾರಿಮಾಡಿದ ಕಾರಣ ಕೇಳುವ ನೋಟೀಸ್‌ಗೆ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (5) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ತಾವು ಅಂಗವಿಕಲತೆ ಹೊಂದಿಲ್ಲದೆ ಇದ್ದರೂ ಸಹ ಆರ್.ಡಿ.ನಂ.0038376081850 ರಂತೆ ಪ್ರತಿ ತಿಂಗಳು ರೂ.1400/-ಅಂಗವಿಕಲ ಪಿಂಚಣಿ ಸೌಲಭ್ಯವನ್ನು ಕಾನೂನು ಬಾಹಿರವಾಗಿ ಪಡೆದು ಪಿಂಚಣಿ ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತೇನೆಂದು ಒಪ್ಪಿಕೊಂಡಿರುತ್ತಾರೆ. ಆದರೆ ತಮ್ಮ ಆರ್.ಡಿ.ಸಂ:0038376066971 ಇರುವ ಕಾರಣ ತಾಲ್ಲೂಕು ಪಂಚಾಯಿತಿ ಗಂಗಾವತಿ ಇವರು ನಮೂದಿಸಿದ ಆರ್.ಡಿ.ನಂಬರಿಗೂ ತಮ್ಮ ಆರ್.ಡಿ.ನಂಬರಿಗೂ ಯಾವುದೇ ಸಾಮ್ಯ ಇರುವುದಿಲ್ಲ. ಕಾರಣ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಪಂಚಾಯಿತಿ ಸದಸ್ಯತ್ವವನ್ನು ರದ್ದು ಮಾಡಿಸಲೇಬೇಕಂಬ ದುರುದ್ದೇಶದಿಂದ ಹಾಗೂ ರಾಜಕೀಯ ಪ್ರೇರಿತರಾಗಿ ಸುಳ್ಳು ಮಾಹಿತಿಯನ್ನು ಕೊಟ್ಟಿರುತ್ತಾರೆಂದು ಮೇಲೆ ವಿವರಿಸಿದ ಆರ್.ಡಿ.ಸಂಖ್ಯೆಗಳ ಪ್ರಕಾರ ತಾನು ಹೊಂದಿದ ಆರ್.ಡಿ.ನಂ.ಗೂ ಕಾರಣ ಕೇಳುವ ನೋಟೀಸ್‌ನಲ್ಲಿ ನೀಡಿರುವ ನಂಬರ್‌ಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲವೆಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

**ವಿಚಾರಣಾ ಅಧಿಕಾರಿಗಳ ಅಂಶಗಳು:-**

- ಸದರಿ ಪ್ರಕರಣದಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ವೆಂಕಟಗಿರಿ ಹೋಬಳಿಯ ಬಸಾಪಟ್ಟಣ ಗ್ರಾಮದಲ್ಲಿ ಸುಮಾರು 600 ಜನ ನಕಲಿ ಮಾಶಾಸನ ಫಲಾನುಭವಿಗಳು ಇರುವ ಬಗ್ಗೆ ದಿನಪತ್ರಿಕೆಗಳಲ್ಲಿ ಸುದ್ದಿ ಪ್ರಕಟಣೆಗೊಂಡ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕೊಪ್ಪಳ ಇವರ ಆದೇಶ ದಿನಾಂಕ:25.10.2018ರ ಮೂಲಕ ಶ್ರೀ ಅಕ್ಷಯ್ ಶ್ರೀಧರ್, ಪರೀಕ್ಷಾರ್ಥ ಭಾ.ಅ.ಸೇ. ಅಧಿಕಾರಿ ಹಾಗೂ ಶ್ರೀ ಹೆಚ್.ವಿಶ್ವನಾಥ ಚುನಾವಣಾ ತಹಸೀಲ್ದಾರ್, ಜಿಲ್ಲಾಧಿಕಾರಿಗಳು ಕಛೇರಿ ಕೊಪ್ಪಳ ಇವರನ್ನು ಒಳಗೊಂಡಂತೆ ತಂಡವನ್ನು ರಚಿಸಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತನಿಖೆ ಕೈಗೊಂಡು ತನಿಖಾ ವರದಿಯನ್ನು ಸಲ್ಲಿಸಲು ಆದೇಶಿಸಿರುತ್ತಾರೆ
- ಜಿಲ್ಲಾಧಿಕಾರಿಗಳ ಕೊಪ್ಪಳ ಇವರ ಆದೇಶ ದಿನಾಂಕ:25.10.2018 ರನ್ವಯ ಸದರಿ ತಂಡವು ಗಂಗಾವತಿ ತಾಲ್ಲೂಕಿನ ವೆಂಕಟಗಿರಿ ಹೋಬಳಿ ನಾಡ ಕಛೇರಿಗೆ ಭೇಟಿ ನಿಡಿ ಬಸಾಪಟ್ಟಣ ಗ್ರಾಮದಲ್ಲಿ ಸುಮಾರು 600 ಜನರ ನಕಲಿ ಮಾಶಾಸನ ಫಲಾನುಭವಿಗಳು ಇರುವ ಬಗ್ಗೆ ಖುದ್ದು ಹಾಜರಾಗಿ ಪರಿಶೀಲನೆ ಹಾಗೂ ವಿಚಾರಣೆ ಮಾಡಿ ದಿನಾಂಕ:31.10.2018 ರಂದು ಜಿಲ್ಲಾಧಿಕಾರಿಗಳು ಕೊಪ್ಪಳ ಇವರಿಗೆ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.
- ಸದರಿ ತನಿಖಾ ತಂಡವು ಬಸಾಪಟ್ಟಣ ಗ್ರಾಮದ ಭೌತಿಕ ವಿಚಾರಣೆ ಸಮಯದಲ್ಲಿ ಕೆಲವರನ್ನು ವಿಚಾರಿಸಿದಾಗ, 3ನೇ ವಾರ್ಡಿನ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್ ಇವರು ತಾವುಗಳು ಒಂದು ಜವಾಬ್ದಾರಿಯುತ ಹದ್ದೆಯಲ್ಲಿದ್ದು, ಅವರು ಅಂಗವಿಕಲತೆ ಅಲ್ಲದೇ ಇದ್ದರೂ ಆರ್.ಡಿ.ಸಮಕ್ಕೆ:003837608185 ರಂತೆ ಪ್ರತಿ ತಿಂಗಳು ರೂ.1400/-ಗಳ ಅಂಗವಿಕಲ ಪಿಂಚಣಿ ಸೌಲಭ್ಯವನ್ನು ಕಾನೂನು ಬಾಹೀರವಾಗಿ ಪಡೆಯುತ್ತಿರುತ್ತಾರೆ ಹಾಗೂ ಗ್ರಾಮದಲ್ಲಿ ಕೆಲವು ಬಡ ಜನರಿಗೆ ಮಾಶಾಸನ ಆದೇಶಗಳನ್ನು ಅವರೇ ಇರಿಸಿಕೊಂಡು ಸುಮಾರು 06 ತಿಂಗಳವರೆಗೆ ಪೋಸ್ಟ್ ಮ್ಯಾನ್ ಇವರಿಂದ ಅವರೇ ಪಿಂಚಣಿ ಹಣ ಪಡೆದು ಫಲಾನುಭವಿಗಳಿಂದ ಕೇವಲ ಸಹಿ ಮಾತ್ರ ಪಡೆಯುತ್ತಿರುವುದು ಬೆಳಕಿಗೆ ಬಂದಿರುತ್ತದೆ ಹಾಗೂ ವಡ್ಡರಹಟ್ಟಿ ಪೋಸ್ಟ್ ಮ್ಯಾನ್ ಇವರೂ ಕೂಡ ಪಿಂಚಣಿ ಫಲಾನುಭವಿಗಳ ಸಹಿ ಪಡೆದು ಪಿಂಚಣಿ ಹಣವನ್ನು ಶ್ರೀಮತಿ ಕಾಸೀಂಬಿ ಇವರಿಗೆ ನೀಡಿರುವುದಾಗಿ ಕಂಡು ಬರುತ್ತದೆಂದು ತಿಳಿಸಿರುತ್ತಾರೆ. ಅಲ್ಲದೇ ಇದಕ್ಕೆ ಪೂರಕವಾಗಿ ಶ್ರೀಮತಿ ಲಕ್ಷ್ಮಮ್ಮ ಗಂಡ ದಿ: ಈರಪ್ಪ ಮತ್ತು ಶ್ರೀ ಹನುಮಂತಪ್ಪ ತಂದೆ ಹುಲಗಪ್ಪ ಇವರಿಬ್ಬರೂ ಸಂಧ್ಯಾ ಸುರಕ್ಷಾ ಮತ್ತು ವಿಧವಾ ವೇತನ ಫಲಾನುಭವಿಗಳಾಗಿದ್ದು, ಸುಮಾರು ಆರು ತಿಂಗಳು ಗತಿಸಿದರೂ ಇವರಿಗೆ ಪಿಂಚಣಿ ಹಣ ನೀಡಿರುವುದಿಲ್ಲ. ಇವರನ್ನು ಗ್ರಾ ಲೆಕ್ಕಾಧಿಕಾರಿಗಳು ಸಂದರ್ಶನಕ್ಕೆ ಒಳಪಡಿಸಿ ವಿಚಾರಿಸಿದಾಗ ಮೇಲಿನಂತೆ ಖುದ್ದು ಲಿಖಿತ ಹೇಳಿಕೆ ನೀಡಿರುವುದರಿಂದ ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್, ಗ್ರಾಮ ಪಂಚಾಯತ ಸದಸ್ಯರು ಬಸಪಟ್ಟಣ ಮತ್ತು ವಡ್ಡರಟ್ಟಿ ಪೋಸ್ಟ್ ಮ್ಯಾನ್ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ತನಿಖಾ ತಂಡವು ತನಿಖಾ ವರದಿಯಲ್ಲಿನ ಪುಟ ಸಂಖ್ಯೆ:4 & 5 ರಲ್ಲಿನ ಕ್ರಮ ಸಂಖ್ಯೆ: (12) ರಲ್ಲಿ ತಿಳಿಸಿರುವುದು ಕಂಡು ಬರುತ್ತದೆ.

- ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್, ಬಸಾಪಟ್ಟಣ ಗ್ರಾಮ ಪಂಚಾಯಿತಿಯ ಸದಸ್ಯರು ಇವರು ಅಂಗವಿಕಲತೆ ಎಷ್ಟು ಪ್ರತಿಶತ ಇರುತ್ತದೆಂದು ಹಾಗೂ ಸದರಿಯವರು ಅಂಗವಿಕಲತೆ ಹೊಂದಿರುವ ಕುರಿತು ಜಿಲ್ಲಾ ಸರ್ಕಾರಿ ವೈದ್ಯರು ದೃಢೀಕರಿಸಿರುವ ಬಗ್ಗೆ ಯಾವುದೇ ದಾಖಲಾತಿ ಸಲ್ಲಿಸಿರುವುದಿಲ್ಲ. ಸದರಿಯವರು ಕೇವಲ ಬಲಗಾಲಿನ ಮೂಳೆ ಮುರಿದಿದ್ದು ಮತ್ತು ಎಡ ಕೈಯ ಮೂಳೆ ಮುರಿದಿದ್ದು ಈ ಕುರಿತು ಚಿಕಿತ್ಸೆ ಪಡೆದಿರುವ ಕುರಿತು ದಾಖಲಾತಿಗಳು ಸಲ್ಲಿಸಿದ್ದು, ಈ ದಾಖಲಾತಿಗಳು ಸದರಿಯವರಿಗೆ ಅಂಗವಿಕಲತೆ ಪಿಂಚಣಿ ಮಂಜೂರಿಯಾದ ನಂತರದ ದಿನಾಂಕದಂದು ಪಡೆದ ಚಿಕಿತ್ಸೆಯ ದಾಖಲಾತಿಗಳು ಇರುವುದು ಕಂಡು ಬರುತ್ತದೆ. ಹಾಗೂ ಸದರಿಯವರು ಸಲ್ಲಿಸಿದ ಸಮಜಾಯಿಷಿಯನ್ನು ಸಮಂಜಸವಿರದೇ ಇರುವುದರಿಂದ ಒಪ್ಪಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್, ಬಸಾಪಟ್ಟಣ ಗ್ರಾಮ ಪಂಚಾಯಿತಿಯ ಸದಸ್ಯರು ಇವರು ಒಂದು ಜವಾಬ್ದಾರಿಯುತ ಹುದ್ದೆಯಲ್ಲಿದ್ದು, ಅವರು ಅಂಗವಿಕಲತೆ ಹೊಂದಿರದೇ ಇದ್ದರೂ ಸಹ ಆರ್.ಡಿ.ಸಂ:0038376066971 ರಂತೆ ಪ್ರತಿ ತಿಂಗಳು ರೂ.1400/- ಗಳ ಅಂಗವಿಕಲ ಪಿಂಚಣಿ ಸೌಲಭ್ಯವನ್ನು ಕಾನೂನು ಬಾಹಿರವಾಗಿ ಪಡೆದು ಸರ್ಕಾರದ ಹಣ ದುರ್ಬಳಕೆ ಮಾಡಿಕೊಂಡಿರುವುದು ಕಂಡು ಬರುತ್ತದೆ ಹಾಗೂ ಶ್ರೀಮತಿ ಲಕ್ಷ್ಮಮ್ಮ ಗಂಡ ದಿ: ಈರಪ್ಪ ಮತ್ತು ಶ್ರೀ ಹನುಮಂತಪ್ಪ ತಂದೆ ಹುಲಗಪ್ಪ ಇವರಿಬ್ಬರೂ ಸಂಧ್ಯಾ ಸುರಕ್ಷಾ ಮತ್ತು ನೀಡಿರುವುದಿಲ್ಲ. ಇವರನ್ನು ಗ್ರಾಮ ಲೆಕ್ಕಾಧಿಕಾರಿಗಳು ಸಂದರ್ಶನಕ್ಕೆ ಒಳಪಡಿಸಿ ವಿಚಾರಿಸಿದಾಗ ಇವರುಗಳು ಖುದ್ದು ಸಲ್ಲಿಸಿದ ಲಿಖಿತ ಹೇಳಿಕೆಯಿಂದ ಇವರುಗಳಿಗೆ ಮಂಜೂರಾದ ಮಾಶಾಸನ ಆದೇಶಗಳನ್ನು ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್, ಬಸಾಪಟ್ಟಣ ಗ್ರಾಮ ಪಂಚಾಯಿತಿಯ ಸದಸ್ಯರು ಇವರಲ್ಲಿಯೇ ಇರಿಸಿಕೊಂಡು ಸುಮಾರು 06 ತಿಂಗಳವರೆಗೆ ಪೋಸ್ಟ್ ಮ್ಯಾನ್ ಇವರಿಂದ ಅವರೇ ಪಿಂಚಣಿ ಹಣ ಪಡೆದು ಫಲಾನುಭವಿಗಳಿಂದ ಕೇವಲ ಸಹಿ ಮಾತ್ರ ಪಡೆಯುತ್ತಿದ್ದರು ಎಂಬ ವಿಷಯವು ಸಹ ದೃಢಪಟ್ಟಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993 ರ ಪ್ರಕರಣ 43(ಎ)(1) ರನ್ವಯ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಬಸಾಪಟ್ಟಣ ಗ್ರಾಮ ಪಂಚಾಯಿತಿಯ ಬಸಾಪಟ್ಟಣ ಗ್ರಾಮದ ಮೂರನೇ ವಾರ್ಡ್‌ನ ಪಂಚಾಯಿತಿ ಸದಸ್ಯರಾದ ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್ ರವರನ್ನು ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/734/ಗ್ರಾಪಂಅ/2019</u>**
**<u>ಬೆಂಗಳೂರು, ದಿನಾಂಕ:21-10-2019.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಸದಸ್ಯರಾದ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಬಸಾಪಟ್ಟಣ ಗ್ರಾಮ ಪಂಚಾಯಿತಿಯ ಬಸಾಪಟ್ಟಣ ಗ್ರಾಮದ ಮೂರನೇ ವಾರ್ಡ್‌ನ ಪಂಚಾಯಿತಿ ಸದಸ್ಯರಾದ ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್ ಇವರು ಕರ್ತವ್ಯದಲ್ಲಿ ಬೇಜವಾಬ್ದಾರಿತನ ಹಾಗೂ ಕಾನೂನು ಬಾಹಿರವಾಗಿ ಬಡ ಕುಟುಂಬಗಳ ಪಿಂಚಣಿ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ)(1) ರನ್ವಯ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಬಸಾಪಟ್ಟಣ ಗ್ರಾಮ ಪಂಚಾಯಿತಿಯ ಬಸಾಪಟ್ಟಣ ಗ್ರಾಮದ ಮೂರನೇ ವಾರ್ಡ್‌ನ ಪಂಚಾಯಿತಿ ಸದಸ್ಯರಾದ ಶ್ರೀಮತಿ ಕಾಸೀಂಬಿ ಗಂಡ ಇಮಾಮ್‌ಸಾಬ್ ರವರನ್ನು ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Narayan
22/10/19

(ಡಿ.ಜಿ. ನಾರಾಯಣ)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.

2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ಜಿಲ್ಲೆ.
3. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಯಲಬುರ್ಗಾ, ಕೊಪ್ಪಳ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಸಾಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
5. ಶ್ರೀಮತಿ ಕಾಸೀಂಬಿ ಗಂಡ ಇಮಾಮ್ ಸಾಬ್, ಬಸಾಪಟ್ಟಣ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
6. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್-1) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.

******